**OS.No.**13/2019

**ಡಿ ಡಬ್ಲ್ಯೂಃ2**

**ದಿಃ 29-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ವೆ ಎಂ ಆರ್ ವಾದಿಗಳ ಪರ ವಕೀಲರಿಂದ**

ವಿ ಹೆಚ್ ಶಿವರುದ್ರಪ್ಪರವರ ಮಾಹಿತಿ ನನಗೆ ಇದೆ. ಸದರಿ ವಿ ಹೆಚ್ ಶಿವರುದ್ರಪ್ಪರವರಿಗೆ ನಾಲ್ಕು ಜನ ಗಂಡು ಮಕ್ಕಳು ಮತ್ತು ಎರಡು ಹೆಣ್ಣು ಮಕ್ಕಳು. ಶಿವರುದ್ರಪ್ಪರವರು ಎಷ್ಟು ವರ್ಷಗಳ ಹಿಂದೆ ಮರಣ ಹೊಂದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರಕರಣವನ್ನು ಯಾರು ಯಾರ ವಿರುದ್ದ ಮತ್ತು ಯಾವ ಕಾರಣಕ್ಕಾಗಿ ದಾಖಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. 2 ನೇ ಪ್ರತಿವಾದಿ ನನ್ನೊಂದಿಗೆ ಚೆನ್ನಾಗಿ ಇದ್ದಾರೆ. 2 ನೇ ಪ್ರತಿವಾದಿ ವಿ ಹೆಚ್ ಶಿವರುದ್ರಪ್ಪರವರ ಮಗ ಎಂದರೆ ಸರಿ. 2 ನೇ ಪ್ರತಿವಾದಿಯ ಮನೆಯಲ್ಲಿ ಅವರೆ ಹಿರಿಯ ಮಗ. ಶಿವರುದ್ರಪ್ಪರವರ ಮರಣ ನಂತರ 2 ನೇ ಪ್ರತಿವಾದಿಯೇ ಮನೆತನದ ಯಜಮಾನಿಕೆ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರಕರಣದ ಸಮನ್ಸ್ ಬಂದ ನಂತರ ಯಾವ ಯಾವ ಆಸ್ತಿಗಳ ಮೇಲೆ ಯಾವ ಯಾವ ಪರಿಹಾರ ಕೋರಿ ಪ್ರಕರಣ ದಾಖಲಿಸಿದ್ದಾರೆ ಎಂದು ನಾನು ಕೇಳಿ ತಿಳಿದುಕೊಂಡಿಲ್ಲ. ದಾವಾ ಆಸ್ತಿಗಳ ಮಾಹಿತಿ ನನಗೆ ಗೊತ್ತಿಲ್ಲ. ನನ್ನ ಪ್ರತಿವಾದ ಪತ್ರಗಳ ಸಂಗತಿ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಪ್ರತಿವಾದ ಪತ್ರವನ್ನು ಯಾರು ಹೇಳಿ ಬರೆಯಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಯಾರು ಬರೆಯಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರವನ್ನು ತಯಾರಿಸಿದ್ದು ಅದಕ್ಕೆ ನಾನು ಸಹಿ ಮಾಡಿದ್ದು ಅದರ ಹೊರತಾಗಿ ನನಗೆ ಏನು ಗೊತ್ತಿಲ್ಲ ಎಂದರೆ ಗೊತ್ತಿಲ್ಲ.

ಈ ಪ್ರಕರಣ ದಾಖಲಾದ ನಂತರ ನಾನು ಚನ್ನಗಿರಿಯ ಸಿವಿಲ್ ನ್ಯಾಯಾಲಯದಲ್ಲಿ ನನ್ನ ಮಕ್ಕಳ ವಿರುದ್ದ ಪ್ರಕರಣ ದಾಖಲಿಸಿದ್ದೇನೆ. ಜಮೀನು ಹೊಡೆಯುವ ಪರಿಹಾರ ಕೋರಿ ಪ್ರಕರಣ ದಾಖಲಿಸಿದ್ದೇನೆ. ವಾದಿಗಳು ಸಾಗುವಳಿ ಮಾಡುತ್ತಿರುವ ಜಮೀನುಗಳನ್ನು ಬಿಡಿಸಿಕೊಳ್ಳಲು ನಾನು ಸದರಿ ಪ್ರಕರಣಗಳನ್ನು ದಾಖಲಿಸಿದ್ದೇನೆ ಎಂದರೆ ಸರಿ. ನಾನು ದಾಖಲಿಸಿದ ಪ್ರಕರಣವು ಈಗಲೂ ನಡೆಯುತ್ತಿದ್ದು ಮತ್ತು ಸದರಿ ಪ್ರಕರಣದಲ್ಲಿ ಈ ಪ್ರಕರಣದ ವಾದಿಗಳು ಸಹ ಪಕ್ಷಗಾರರಾಗಿದ್ದಾರೆ ಎಂದರೆ ಸರಿ. ಈ ಪ್ರಕರಣ ದಾಖಲಿಸಿದ ನಂತರ ನಾನು ನನ್ನ ಮಕ್ಕಳ ಹೆಸರಿಗೆ ದಾಖಲೆ ನೋಂದಣಿ ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಪ್ರಕರಣ ದಾಖಲಿಸುವುದಕ್ಕೂ ಮುಂಚೆ ದಿನಾಂಕ 13.03.2019 ರಂದು ದಾಖಲೆ ಬರೆದುಕೊಟ್ಟಿದ್ದಾಗಿ ನುಡಿಯುತ್ತಾರೆ. ನಾನು ಚನ್ನಗಿರಿಯ ಸಿವಿಲ್ ನ್ಯಾಯಾಲಯದಲ್ಲಿ ಈ ಪ್ರಕರಣದ ದಾವಾ ಅನುಸೂಚಿ ಕ್ರಮ ಸಂಖ್ಯೆ 7 ರ ಜಮೀನು ಆಸ್ತಿಗೆ ಸಂಬಂಧಿಸಿದಂತೆ ದಾಖಲಿಸಿದ್ದೇನೆ.

ದಾವಾ ಅನುಸೂಚಿ ಕ್ರಮ ಸಂಖ್ಯೆ 7 ರ ಆಸ್ತಿಯ ದಾಖಲೆಗಳು 2018-19 ರಲ್ಲಿ ನನ್ನ ಹೆಸರಿಗೆ ಇತ್ತು. ಈ ಪ್ರಕರಣ ದಾಖಲಿಸಿದ ನಂತರ ನಾನು 2 ನೇ ಪ್ರತಿವಾದಿಯ ಮಾತು ಕೇಳಿ ನನ್ನ ಮಕ್ಕಳ ಹೆಸರಿಗೆ ದಾನ ಪತ್ರ ಬರೆದುಕೊಟ್ಟಿದ್ದೇನೆ ಎಂದರೆ ಸಾಕ್ಷಿ ದಾನ ಪತ್ರ ಬರೆದುಕೊಟ್ಟಿರುವುದು ನಿಜ ಆದರೆ 2 ನೇ ಪ್ರತಿವಾದಿಯ ಮಾತು ಕೇಳಿ ಅಲ್ಲ ಎಂದು ನುಡಿಯುತ್ತಾರೆ. ದಾವಾ ಕ್ರಮ ಸಂಖ್ಯೆ 7 ರ ಅನುಸೂಚಿ ಆಸ್ತಿಯನ್ನು ಸುಮಾರು 30 ವರ್ಷಗಳ ಹಿಂದೆಯೇ ವಾದಿಗಳ ತಂದೆಯೇ ವಿ ಹೆಚ್ ಶಿವರುದ್ರಪ್ಪರವರಿಗೆ ಮಾರಾಟ ಮಾಡಿದ್ದೆ ಎಂದರೆ ನನಗೆ ಗೊತ್ತಿಲ್ಲ. ಹಾಗೆ ಮಾರಾಟ ಮಾಡಿದ ನಂತರ 30 ವರ್ಷಗಳ ಹಿಂದೇಯೇ ಸದರಿ ಆಸ್ತಿಯ ಸ್ವಾಧೀನವನ್ನು ವಿ ಎಚ್ ಶಿವರುದ್ರಪ್ಪರವರಿಗೆ ವಹಿಸಿಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಶಿವರುದ್ರಪ್ಪರವರು ದಾವಾ ಕ್ರಮ ಸಂಖ್ಯೆ 7 ರ ಅನುಸೂಚಿ ಆಸ್ತಿಯನ್ನು ಕ್ರಯಕ್ಕೆ ಪಡೆದ ನಂತರ ಸದರಿ ಜಮೀನು ಆಸ್ತಿಯಲ್ಲಿ ಬೋರ್ ವೆಲ್ ಕೊರೆಯಿಸಿ ಸಾಗುವಳಿ ಮಾಡುತ್ತಾ ಬಂದಿದ್ದರು ಎಂದರೆ ಸರಿಯಲ್ಲ. ನಾನು ದಾವಾ ಅನುಸೂಚಿ 7 ರ ಆಸ್ತಿಯಲ್ಲಿ ಬೋರ್ ವೆಲ್ ಕೊರೆಯಿಸಿಲ್ಲ. ದಾವಾ ಅನುಸೂಚಿ 7 ರ ಆಸ್ತಿಯಲ್ಲಿ ವಾದಿಗಳಿಗೆ ಭಾಗ ಸಿಗಬಾರದು ಎಂಬ ಕಾರಣ 2 ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಮತ್ತು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ. ನಾನು ಬರೆದುಕೊಟ್ಟ ದಾನ ಪತ್ರದ ಆಧಾರದ ಮೇಲೆ ನನ್ನ ಮಕ್ಕಳು ಚನ್ನಗಿರಿಯ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದಾರೆ. ದಾವಾ ಅನುಸೂಚಿ ಕ್ರಮ ಸಂಖ್ಯೆ 7 ರ ಆಸ್ತಿಯಲ್ಲಿ ನನಗಾಗಲೀ ಮತ್ತು ನನ್ನ ಮಕ್ಕಳಿಗಾಗಲಿ ಯಾವುದೇ ಹಕ್ಕು ಮತ್ತು ಅನುಭವ ಇರದೇ ಇರುವ ವಿಷಯ ಗೊತ್ತಿದ್ದರೂ ಕೂಡ ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ. ದಾವಾ ಕ್ರಮ ಸಂಖ್ಯೆ 7 ರ ಅನುಸೂಚಿ ಆಸ್ತಿಯನ್ನು ಬಿಡಿಸಿಕೊಳ್ಳುವ ಸಲುವಾಗಿ ನನ್ನ ಮಕ್ಕಳು ವಾದಿಗಳ ವಿರುದ್ದ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ.

ಶ್ರೀ ಎಸ್ ಬಿ ಪಿ ಪ್ರತಿವಾದಿ ನಂ 4 ರಿಂದ 6 ರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು ಅನುಮತಿಸಲಾಯಿತು.

**ಮರು ವಿಚಾರಣೆ ಇಲ್ಲ:-**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.